ಚಿಕ್ಕನಾಯಕನ ಹಳ್ಳಿ - ತಿಪಟೂರು ರಸ್ತೆ ಅಭಿವೃದ್ಧಿ

953 (1458) - ಶ್ರೀ ಸುರೇಶ್ ಬಾಬು ಸಿ.ಬಿ. (ಚಿಕ್ಕನಾಯಕನಹಳ್ಳಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಚಿಕ್ಕನಾಯಕನಹಳ್ಳಿಯಿಂದ ತಿಪಟೂರಿಗೆ ಹೋಗುವ ಲೋಕೋಪಯೋಗಿ ರಸ್ತೆಯು ದುಸ್ಥಿತಿಯಲ್ಲಿದ್ದು, ವಾಹನ ಸಂಚಾರಕ್ಕೆ ದುಸ್ತರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ. ಈ ರಸ್ತೆಯನ್ನು ಎಷ್ಟು ದಿನಗಳಲ್ಲಿ ದುರಸ್ತಿ ಮಾಡಿಸಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ. ಚಿಕ್ಕನಾಯಕನಹಳ್ಳಿಯಿಂದ ತಿಪಟೂರಿಗೆ ಹೋಗುವ ಜಿಲ್ಲಾ ಮುಖ್ಯ ರಸ್ತೆಯನ್ನು ಉಸ್ತುವಾರಿ ಅನುದಾನದಲ್ಲಿ ಗುಂಡಿಗಳನ್ನು ತುಂಬಿ ವಾಹನ ಸಂಚಾರಕ್ಕೆ ಅನುವಾಗುವಂತೆ ಇಡಲಾಗಿದೆ.

ಆ. ರಸ್ತೆಯಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚಿ ವಾಹನ ಸಂಚಾರಕ್ಕೆ ಅನುವು ಮಾಡಲಾಗಿದೆ. ಇದಲ್ಲದೆ ಈಗಾಗಲೇ ಕಿಮೀ 14.00 ದಿಂದ 18.00 ವರೆಗೆ ಮರುಡಾಂಬರೀಕರಣ ಕೆಲಸವು ಪ್ರಗತಿಯಲ್ಲಿದೆ. ಉಳಿದ ಭಾಗಗಳ ಮರುಡಾಂಬರೀಕರಣವನ್ನು ಮಾಡುವ ಕುರಿತು ಅನುದಾನದ ಲಭ್ಯತೆಗನುಗುಣವಾಗಿ ಪರಿಶೀಲಿಸಲಾಗುವುದು.

ಬೆಳಗಾವಿ ನಗರದಲ್ಲಿ ಸರ್ಕಾರಿ ವಸತಿ ಗೃಹಗಳು

954 (1062) - ಶ್ರೀ ಉಮೇಶ್ ವಿಶ್ವನಾಥ್ ಕತ್ತಿ (ಹುಕ್ಕೇರಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬೆಳಗಾವಿ ನಗರದಲ್ಲಿ ಸರಕಾರಿ ವಸತಿಗೃಹಗಳ ದುರಸ್ತಿಗಾಗಿ 2000-01ರಿಂದ 2001-02 ರವರೆಗೆ ಬಿಡುಗಡೆ ಮಾಡಿದ ಅನುದಾನ ಎಷ್ಟು;

ಆ. ಸರಕಾರಿ ವಸತಿ ಗೃಹಗಳ ದುರಸ್ಥಿಗಾಗಿ ಯಾವ ಕೆಲಸಗಳನ್ನು ತೆಗೆದುಕೊಂಡಿದ್ದಾರೆ ಮತ್ತು ಖರ್ಚಾದ ಅನುದಾನ ಎಷ್ಟು.

ಇ. ಅದೇ ರೀತಿಯಾಗಿ ಸರಕಾರಿ ವಸತಿಗೃಹ ಕ್ಲಾಸ್-3 ಗೃಹ 1 ರಿಂದ 20 ರವರೆಗೆ ಗೃಹಗಳ ಯಾವ ಯಾವ ದುರಸ್ತಿ ಕೆಲಸ ತೆಗೆದುಕೊಳ್ಳಲಾಗಿದೆ. 2000-01ರಿಂದ 2002-03ರವರೆಗೆ ಖರ್ಚಾದ ವಿವರಣೆ ನೀಡುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ. ಬೆಳಗಾವಿ ನಗರದಲ್ಲಿ ಸರ್ಕಾರಿ ವಸತಿಗೃಹಗಳ ದುರಸ್ತಿಗಾಗಿ 2000-01 ರಿಂದ 2001-02 ರವರೆಗೆ ಬಿಡುಗಡೆ ಮಾಡಿರುವ ಒಟ್ಟು ಅನುದಾನ ರೂ. 108-84 ಲಕ್ಷಗಳು.

ಆ. ಸರ್ಕಾರಿ ವಸತಿಗೃಹಗಳಿಗೆ ನೈರ್ಮಲೀಕರಣ, ನೀರು ಸರಬರಾಜು, ಬಾಗಿಲು ಕಿಟಕಿ ದುರಸ್ತಿ, ಒಡೆದು ಹೋದ ಕಿಟಕಿಗಳ ಗಾಜು ಅಳವಡಿಸುವುದು, ಜಲ ನಿರೋಧಕ ಒದಗಿಸುವುದು ಮತ್ತು ಸುಣ್ಣ ಬಣ್ಣ ಹಚ್ಚುವ ಕೆಲಸ ಕೈಗೊಳ್ಳಲಾಗಿದೆ. ಈ ಕಾಮಗಾರಿಗಳಿಗೆ ಒಟ್ಟು ರೂ. 108.84 ಲಕ್ಷಗಳ ಅನುದಾನ ಖರ್ಚಾಗಿದೆ.

ಇ. ಸರ್ಕಾರಿ ವಸತಿಗೃಹ ಕ್ಲಾಸ್-3 ಗೃಹ 1 ರಿಂದ 20 ವರೆಗಿನ ಗೃಹಗಳಿಗೆ ಛಾವಣಿ ದುರಸ್ತಿ ಹಾಗೂ ಛಾವಣಿಗೆ ಜಲನಿರೋಧಕ ಒದಗಿಸುವುದು, ನೈರ್ಮಲೀಕರಣ ಹಾಗೂ ಸುಣ್ಣ ಬಣ್ಣ ಹಚ್ಚುವ ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ.